**ದಿನಾಂಕಃ 30.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಸಿ.ಎಂ.ಕೆ ವಕೀಲರಿಂದಃ**

1) ದಾವಾ ಸ್ವತ್ತಿನ ಪೈಕಿ 1 ಗುಂಟೆ ಜಾಗಕ್ಕೆ 2020ರಲ್ಲಿ ಎಷ್ಟು ಮೌಲ್ಯ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ದೇವಿರಮ್ಮನವರ ಸೊಸೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮಾವನ ಹೆಸರು ಚಲುವಯ್ಯ. ನನ್ನ ಮಾವನಿಗೆ ಒಂದು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು. ಈ ಪ್ರಕರಣದ ಹೂಡುವ ಕಾಲಕ್ಕೆ ನನ್ನ ಗಂಡ ಜೀವಂತ ಇದ್ದರು. ನನ್ನ ಗಂಡನ ಅಕ್ಕ ಗೌರಮ್ಮ ಈಗಲೂ ಜೀವಂತ ಇರುತ್ತಾರೆ. ನನ್ನ ಗಂಡನ ಸಹೋದರ ದೊಡ್ಡಬೆಟ್ಟೇಗೌಡ. ಆತ ಮೃತಪಟ್ಟಿರುತ್ತಾರೆ. ಆತನಿಗೂ ಮಕ್ಕಳು ಇರುತ್ತಾರೆ.

2) ನಾನು ಸಲ್ಲಿಸಿರುವ ದಾಖಲೆಗಳಲ್ಲಿ ಪ್ರತಿವಾದಿಗಳ ತಂದೆ ಮೃತ ಜಗದೀಶ್ ರವರು ಸ್ವಾಧೀನದಲ್ಲಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಶಾನುಭೋಗನ ಮನೆಯಲ್ಲಿ ನನ್ನ ಗಂಡ ಮತ್ತು ನನ್ನ ಭಾವ ಇಬ್ಬರೂ ಕೂಲಿ ಕೆಲಸ ಮಾಡುತ್ತಿದ್ದರು. ಮೃತ ಜಗದೀಶ್ ರವರ ತಂದೆ ಸುಬ್ಬರಾಯರವರು ಶಾನುಭೋಗರು ಆಗಿದ್ದರು ಎಂದರೆ ಸರಿ. ಸುಬ್ಬರಾಯರವರು ಮರಣ ಹೊಂದಿದ ನಂತರ ಆತನ ಮಗ ಮೃತ ಜಗದೀಶ್ ರವರು ಶಾನುಭೋಗರಾಗಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. 1961 ರಿಂದ 1972 ರ ವರೆಗೆ ಮೃತ ಜಗದೀಶ್ ರವರು ಶಾನುಭೋಗರಾಗಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಶಾನುಭೋಗರಾಗಿ ಕೆಲಸ ಮಾಡುವವರಿಗೆ ಮಾತ್ರ ದಾವಾ ಸ್ವತ್ತನ್ನು ಕೊಡುಗೆಯಾಗಿ ನೀಡಿದ್ದರು ಎಂದರೆ ಸರಿ. ಶಾನುಭೋಗದಾರರಾಗಿ ಕೆಲಸ ಮಾಡುವ ಹುದ್ದೆಯನ್ನು ರದ್ದುಪಡಿಸಿ ನಂತರ ಗ್ರಾಮ ಲೆಕ್ಕಿಗರ ಹುದ್ದೆಯನ್ನು ಜಾರಿಗೆ ತಂದ ನಂತರ ದಾವಾ ಸ್ವತ್ತನ್ನು ಒಳಗೊಂಡಂತೆ ಒಟ್ಟು ಎರಡು ಸ್ವತ್ತನ್ನು ಜಗದೀಶ್ ರವರಿಗೆ ಸರ್ಕಾರವು ಮರು ಮಂಜುರಾತಿ ಮಾಡಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ.

3) ಮೃತ ಜಗದೀಶ್ ರವರು ತಮಗೆ ಸರ್ಕಾರದಿಂದ ಬಂದಿದ್ದ ಎರಡು ಸ್ವತ್ತುಗಳ ಪೈಕಿ ಒಂದು ಸ್ವತ್ತನ್ನು ಶಾಲೆ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ನೀಡಿದ್ದು, ಇನ್ನೊಂದು ಸ್ವತ್ತನ್ನು ತನ್ನ ಜೀವನಕ್ಕಾಗಿ ಇಟ್ಟುಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆತ ತನ್ನ ಜೀವನನೋಪಯಕ್ಕಾಗಿ ಇಟ್ಟುಕೊಂಡಿದ್ದ ಜಮೀನಿನ ಮೇಲೆ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

4) ದೇವಿರಮ್ಮನವರ ಕುಟುಂಬಕ್ಕೆ ಸಂಬಂಧಿಸಿದಂತೆ ವಂಶವೃಕ್ಷ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಅತ್ತೆ ದೇವಿರಮ್ಮ 20 ವರ್ಷಗಳ ಮೃತಪಟ್ಟಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿಇರುತ್ತಾರೆ ಎಂದರೆ ಸಾಕ್ಷಿಯು ತಾನೇ ಇರುವುದಾಗಿ ನುಡಿಯುತ್ತಾರೆ. ಪ್ರತಿವಾದಿಗಳು ನನ್ನ ಮತ್ತು ಇತರರ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ ಮತ್ತು ಅದು ಸುಳ್ಳು ಪ್ರಕರಣ ಆಗಿರುತ್ತದೆ. ಆ ರೀತಿ ಪ್ರಕರಣ ದಾಖಲಿಸಿದ ನಂತರ ನಾವು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಡುವುದನ್ನು ನಿಲ್ಲಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳ ಸೌಮ್ಯ ಸ್ವಭಾವವನ್ನು ದುರುಪಯೋಗಪಡಿಸಿಕೊಂಡು ಅವರು ಬೆಳೆದ ಬೆಳೆಗಳಿಗೆ ಮತ್ತು ಅವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

5) ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಾಲ್ಲೂಕು ಕಛೇರಿಯಲ್ಲಿ ಒಂದು ಪ್ರಕರಣ ಇದೆ. ಸದರಿ ಪ್ರಕರಣದಲ್ಲಿ ಸ್ಥಳ ತನಿಖೆ ಮಾಡುವಂತೆ ತಹಶೀಲ್ದಾರ್ ರವರು ಆದೇಶ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಕೇಳಿ ತಿಳಿದುಕೊಂಡಿಲ್ಲ. ನನಗಾಗಲೀ, ನನ್ನ ಅತ್ತೆ ಮತ್ತು ನಮ್ಮ ಕುಟುಂಬದ ಇತರೆ ಯಾರಿಗೂ ಸಹ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಕ್ರಮವಾಗಿ ಲಪಟಾಯಿಸಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಈ ದಾವೆಯನ್ನು ಪ್ರತಿವಾದಿಗಳೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**